ಜೊತೆಗೆ ಹೋಗಿರಲ್ಲೇನ್' ಎಂದು ನಾಗನಗೌಡ ಸಿದ್ದಪ್ಪನಿಗೆ ತಲೆಗೆ ಕುಕ್ಕಿದ. 'ಹಂಗಲ್ರೀ ಗೌಡ್ರ, ಗ್ವಾದ್ನಿಗೆ ಹೆಂಗೂ ಕಟ್ಟರ್ತೇವಲ್ಲಾ ಅವರಾ ಇರ್ತಾವಲ್ಲ' ಎಂದು ದನದ ಕೊಟ್ಟಿಗೆ ಒಳಕ್ಕ ನೋಡಲು ಹೋದ. ನಿಂಗಪ್ಪ, ನಾಗನಗೌಡ್ರು ಎಲ್ಲಾರು ಅವನನ್ನು ಹಿಂಬಾಲಿಸಿದರು. ನಿಧಿ ಸಿಕ್ಕಂತಾಗಿ ಮಂಜಣ್ಣ ಗೌಡ್ರಿಗೆ ತೋರಿಸುತ್ತಾ, 'ನೋಡ್ರಿ ಗೌಡ್ರ ನಮ್ಮ ಸ್ವಾಮೇರಿಗೆ ಇಷ್ಟು ಸಾಕು. ಮನೇಗೆ ಬರ್ತಾವ ದನಾ ನೋಡ್ತರ್ರಿ' ಎಂದ. 'ಅಷ್ಟರಾ ಆಗಲಿ ತಗಾ ಒಟ್ಟ ದನಾ ಸಿಕ್ರ ಸಾಕ್ ಆಮ್ಯಾಲ್ ನೋಡಕೆಳ್ಳಾನ, ಆ ಕಳ್‌ಸೂಳೆಮಕ್ಕಳು ಯಾರ್ ಕದ್ದಾರಂತಾ' ಎಂದು ಗೌಡ್ರು ಸಮ್ಮತಿಸಿದರು. ನಾನು ಸ್ವಾಮೇರ್ ಕಂಡು ಬರ್ತನಿ ಅಂತ ಸಿದ್ದಪ್ಪ ಗ್ವಾದ್ನಿಗೆ ಕಟ್ಟದ್ದ ಹಗ್ಗಗಳನ್ನು ಹಿಡಿದುಕೊಂಡು ಹೊರಟ. ಉಳಿದವರು ದನದ ಹೆಜ್ಜೆ ಜೊತೆಗೆ ಕಳ್ಳರ ಹೆಜ್ಜೆಗಳ ಗುರುತು ಹಿಡಿದುಕೊಂಡು ಪತ್ತೆ ಹಚ್ಚುವಂತೆ ಮುಂದಾದರು. ನಿಂಗಪ್ಪ ದಾರಿ ಕಾಣದೆ ಅವರ ಜೊತೆಗೆ ಸಾಗಿದ. ಎರಡು ತಾಸಿನ ಬಳಿಕ ಸಿದ್ದಪ್ಪ ಕೈಯಲೊಂದು ಚೀಟಿ ಹಿಡಿದುಕೊಂಡು ಬರುತ್ತಿದ್ದ. ಅಷ್ಟೊತ್ತಿಗೆ ಎಲ್ಲರೂ ತೆಂಗಿನಮರದ ನೆರಳಿಗೆ ಸುಸ್ತಾಗಿ ಕೂತಿದ್ದರು. ಪಕ್ಕದ ಮಾವಿನ ತೋಪು, ದ್ಯಾವಕ್ಕಳವರ ಹೊಲದ ಆಸುಪಾಸು ದನಾ ಹುಡುಕುತ್ತಾ ಹೋದ ಮಲ್ಲವ್ವ, ಸುಸ್ತಾಗಿ ತಲೆಗೆ ಸೆರಗು ಹೊದ್ದುಕೊಂಡು ಆಯಾಸದಲ್ಲಿ ನಿರಾಸೆ ಹೊತ್ತು ಬಂದಳು. ಪಂಪ್‌ಸೆಟ್ಟಿನ ಮನೆಯ ಗೋಡೆಗೆ ಆತು ಕೂತುಕೊಂಡು, ಕೊಡದಲ್ಲಿನ ನೀರನ್ನು ಚೊಂಬಿಗೆ ಬಗ್ಗಿಸಿಕೊಂಡು ಬಾಯಿಗೆ ನೀರು ಹಾಕಿ ಮುಕ್ಕಳಿಸಿ, ಎರಡು ಗುಟುಕು ನೀರು ಕುಡಿದಳು. ಉಸ್ ಎಂದು ಏದುಸಿರು ಬಿಟ್ಟಳು.

'ಏನರ ಕಂಡವೇನಕಾ' ಎಂದು ಕೇಳಿದ ನಿಂಗಪ್ಪ.

'ಇಲ್ಲ ತಮಾ, ಆಕಡೆಗೊಮ್ಮೆ ನೋಡಕೆಂಡ್ ಬಂದೆ ಎಲ್ಲೂ ಪತ್ತೆಯಿಲ್ಲ' ಎಂದು ಬೇಸರದಿಂದ ನುಡಿದಳು ಮಲ್ಲವ್ವ.

ಸಿದ್ದಪ್ಪ ಬಂದವನೆ 'ಸ್ವಾಮೇರು ಈ ಯಂತ್ರ ಬರದುಕೊಟ್ಟಾರ. ಇದನ್ನ ದನದ ಮನ್ಯಾಗ ಬರೀಬೇಕಂತ, ಬರದ್ರ ದನಾ ಬರ್ತಾವಂತ' ಎಂದು ಚೀಟಿ ತೋರಿಸಿದ. ಓದುಬರಹ ಅಲ್ಪಸ್ವಲ್ಪ ಬರುವ ನಿಂಗಪ್ಪ ಕೈಲಿ ಚೀಟಿ ಹಿಡಿದು ನೋಡಿದ. ಚೀಟಿಯಲ್ಲಿ ಎರಡೆತ್ತು ಆಕಳು ಓಡೋಡಿ ಬರುವಂತೆ ಕಂಡ. ಪಂಪ್ಸೆಟ್ ಮನೆಯಲ್ಲಿನ ವಿಭೂತಿ ಹಿಡಿದು ಕೊಟ್ಟಿಗೆ ಒಳಕ್ಕೆ ಹೋಗಿ ಮೇವು ಹಾಕುವ ಗ್ವಾದ್ನಿಗೆ ತೇರುಗಡ್ಡಿ ಸ್ವಾಮೇರು ಬರೆದು ಕೊಟ್ಟ ಲಿಪಿಯನ್ನು ಹಂಗಂಗೇ ಅಚ್ಚೊತ್ತಿದ.

ಮಧ್ಯಾಹ್ನ ಊಟದ ಸಮಯವಾಗಿತ್ತು. ಅಂಬವ್ವ ಬುತ್ತಿ ಕಟ್ಟಿಕೊಂಡು ಹೊಲಕ್ಕೆ ಧಾವಿಸಿದಳು. ನಾಯಿಗಳು ಬುತ್ತಿಗಂಟಿನ ಅಂಬವ್ವಳನ್ನು ಕಂಡು ಕುಂಯ್ ಕುಂಯ್ ಎನ್ನುತ್ತಾ ಬಾಲವಾಡಿಸಿಕೊಂಡು ಕಾಲುಕಾಲಿಗೆ ಅಡರತೊಡಗಿದವು. ಪಂಪ್‌ಸೆಟ್ ಮನೆಯ ಹತ್ತಿರ ಬುತ್ತಿಗಂಟಿಳಿಸಿ, ತಾಯಿ ಮಲ್ಲವ್ವಳಿಗೆ, 'ಏನಾತವಾ ಏನರಾ ಸುದ್ದಿ' ಎಂದು ಕೇಳಿದಳು. ಕಾಲಿಗೆ ತೊಡರುವ ನಾಯಿಗಳನ್ನು ಒದೆಯುತ್ತಾ, 'ಎಲ್ಲಿ ಹೋಗಿದ್ರ ನಿನ್ನೆ? ಈಗ ಕೂಳು ಕಾಣತ್ಲೆ ಬಂದ್ರೆಲ್ಲ' ಎಂದು ಶಪಿಸಿದಳು.

ಮಲ್ಲವ್ವ, 'ಎಲ್ಲಿ ಸಿಗತುದವ್ವಾ ಯಾ ಮಾಯದಾಗ ಒಯ್ದಾರಾ ಏನ? ಈ ನಾಯ್ಯರ ಹಂಗ್ ಸುಮ್ಮನಿದ್ದು ಅಂತನಿ' ಎಂದಳು. ಅಂಬವ್ವ, 'ಇವೇನ್ ಮಾಡತಾವ್ ಪಾಪ. ಎಲ್ಲಾ ಬಾಯಿಕಟ್ ಮಾಡಿಸ್ಕಂಡ್ ಬಂದರ‍್ತಾರಾ. ಮೂಕಪ್ರಾಣಿ ಒದರಲಾರದಂಗ ಬಾಯಿಕಟ್ ಮಾಡಿಸರ್ತಾರ' ಎಂದು ಬಾನಾಮತಿಯ ಸಂಶಯ ವ್ಯಕ್ತಪಡಿಸಿದಳು.

'ಇರಬೇಕೇನವಾ, ಇಲ್ಲೆ ಪಕ್ಕದಾಗ ಯಾಲ್ಡ್ ಮನಿ ಅದಾವು, ಎದ್ರಿಗೆ ಪೊಲೀಸ್ ಟೇಶನ್ ಬ್ಯಾರೆ ಐತಿ! ಯಾ ಮಾಯದಾಗ ಹೊಡದ್ರೋ, ಏನ್ ಸಾಲದಾಗಿತ್ತೋ ಈ ದುಡಿಲಾರದ ಗಂಡಸರಿಗೆ' ಎಂದಳು ಮಲ್ಲವ್ವ.

'ಏನ್ ಪೊಲೀಸ್ರೋ ಬಿಡವಾ ಹಗಲು ದುಡಿತಾವ, ರಾತ್ರಿ ನಿದ್ದಿ ಮಾಡತಾವ. ಊರ ಹೊರಗ ಅವ್ರಿಗೆ ಯಾರ್ ಏನಾದ್ರೇನು' ಎಂದು ನಾಗನಗೌಡ ಅಸಮಾಧಾನ ವ್ಯಕ್ತಪಡಿಸಿದ.

ಅಂಬವ್ವ ತನ್ನ ದೈವವಾಣಿ ಸರೋಜಮ್ಮಳ ಮಾತಿನಂತೆ ಚೌಡವ್ವಳಿಗೆ ಊದಿನಕಡ್ಡಿ ಕಾಣಿಸಿ ಬರ್ತನಿ ತಡಿ ಎಂದು ಹೊರಟಳು. ಅಂಬವ್ವಳ ಹೆಜ್ಜೆ ಸಪ್ಪಳದ ದನಿಗೆ ಉರಿ ಉರಿ ಬಿಸಿಲಿಗೆ

